# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಪ್ರಸಾದ್, ಕಾರ್ಯದರ್ಶಿ ಮತ್ತು ಶ್ರೀಮತಿ ಶೃತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಕುಂಟೆ ಗ್ರಾಮ ಪಂಚಾಯತಿ, ಹೊಸಕೋಟೆ ತಾಲ್ಲೂಕು, ಇವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ

**ಓದಲಾಗಿದೆ:** ಮಾನ್ಯ ನಿಬಂಧಕರು, ಮಾನ್ಯ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: D.O.No.Compt/BD/3705/2014/ARLO-2 ದಿನಾಂಕ: 22-05-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 03-05-2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ. ಶ್ರೀ ಶಂಕರ್.ಎಂ. ಅರೆಹಳ್ಳಿ ಗ್ರಾಮ, ಆನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಪ್ರಭಾಕರ್.ಎ.ಬಿ. ಅಧ್ಯಕ್ಷರು, ಕಲ್ಕುಂಟೆ ಗ್ರಾಮ ಪಂಚಾಯತಿ, ಹೊಸಕೋಟೆ ತಾಲ್ಲೂಕು, (2) ಶ್ರೀ ಪ್ರಸಾದ್, ಕಾರ್ಯದರ್ಶಿ ಮತ್ತು (3) ಶ್ರೀಮತಿ ಶೃತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಕುಂಟೆ ಗ್ರಾಮ ಪಂಚಾಯತಿ, ಹೊಸಕೋಟೆ ತಾಲ್ಲೂಕು, (ಇನ್ನು ಮುಂದೆ 1 ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು, ಅರೆಹಳ್ಳಿ ಗ್ರಾಮದ ಸರ್ವೆ ನಂ. 100, 101/2, 101/3 ಇವುಗಳ ಮಾಲೀಕರಾದ ರಾಜು ತಂದೆ ಬುಡ್ಡಪ್ಪ ಮತ್ತು ಪಿ.ಲಕ್ಷ್ಮೀನಾರಾಯಣ ಇವರುಗಳು ಈ ಕೃಷಿ ಭೂಮಿ ಹೊಂದಿದ್ದು, ಆದರೆ ಈ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸಿದ್ದು, ಎದುರುದಾರರು ಅಕ್ರಮವಾಗಿ ಕಲ್ಕುಂಟೆ ಗ್ರಾಮಪಂಚಾಯತಿಯಲ್ಲಿ ನಮೂನೆ 9 ಮತ್ತು 11ನ್ನು ದಾಖಲಿಸಿರುತ್ತಾರೆ. ಈ ಬಡಾವಣೆ ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳ, ಉಪವಿಭಾಧಿಕಾರಿಗಳ ಮತ್ತು ಬಿ.ಎಂ.ಆರ್.ಡಿ.ಎ. ಅವರ ಯಾವುದೇ ಭೂಪರಿವರ್ತನಾ ಆದೇಶ ಅಥವಾ ಮಂಜೂರಾತಿ ಆದೇಶ ಬಡಾವಣೆ ಯೋಜನಾ ನಕ್ಷೆ ಇರುವುದಿಲ್ಲ. ಇಲ್ಲಿನ ಕೆಲ ನಿವೇಶನಾಧಾರರಿಗೆ ಗ್ರಾಮಪಂಚಾಯತಿಯಿಂದ ನಕಲಿ ಖಾತಾ ಸಂಖ್ಯೆ ಆಧಾರದ ಮೇಲೆ ಹೊಸಕೋಟೆ ಉಪನೊಂದಾಣಾಧಿಕಾರಿಗಳ ಕಛೇರಿಯಲ್ಲಿ ಅಕ್ರಮ ಬಡಾವಣೆ ನಿರ್ಮಾಣವಾಗಲು ಕಾರಣಕರ್ತರಾಗಿದ್ದು, ಅವರ ವಿರುದ್ಧ ಕ್ರಮಕೈಗಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.8.8.2011ರಂದು ಎಲ್ಲಾ ಗ್ರಾಮಪಂಚಾಯತಿ ಸದಸ್ಯರುಗಳು ಸೇರಿ ಗ್ರಾಮಠಾಣಕ್ಕೆ ಹೊಂದಿಕೊಂಡಿರುವ ಜಾಗವನ್ನು ಅಭಿವೃದ್ಧಿಪಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಆದರೆ 3ನೇ ಎದುರುದಾರರ ಅವಧಿಯಲ್ಲಿ ಇಂತಹ ನಿವೇಶನಗಳಿಗೆ ನಮುನೆ 1ನ್ನು ವಿತರಣೆ ಮಾಡಿರುವುದು ಈ ವಿಚಾರದಲ್ಲಿ ಅವರು ತಮ್ಮನ್ನು ಸಂಪರ್ಕಿಸಿಲ್ಲವೆಂದು ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2011-12ನೇ ಸಾಲಿನಲ್ಲಿ ತಾನು ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದು ಸರ್ವೆ ನಮ.100/1ರಲ್ಲಿ ನಿವೇಶನಗಳನ್ನು ಹಂಚಲಾಗಿದೆ. ದಿ.8.8.2011ರಂದು ಕ್ರಮ ಸಂಖ್ಯೆ 5 ರಲ್ಲಿ ಗ್ರಾಮಪಂಚಾಯತಿ ಸಭೆಯಲ್ಲಿ ನಿವೇಶನಗಳನ್ನು ಖಾತೆ ಮಾಡಿ ನಮೂನೆ 1 ಮತ್ತು 12 ನೀಡಲು ತೀರ್ಮಾನ ತೆಗೆದುಕೊಂಡಿದ್ದು, ಅಂದಿನ ಪಿ.ಡಿ.ಓ. ಆದ 3ನೇ ಎದುರುದಾರರು ನಮೂದು ಮಾಡಿ ನಕಲು ನೀಡಿರುತ್ತಾರೆ. ಆದ್ದರಿಂದ ಈ ಪ್ರಕರಣಕ್ಕೂ ತನಗೂ ಯವುದೇ ಸಂಬಂಧವಿರುವುದಿಲ್ಲ, ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.8.8.2011ರ ಗ್ರಾಮಪಂಚಾಯತಿಯ ಸಾಮನ್ಯ ಸಭೆಯಲ್ಲಿ 100, 101/2, ಮತ್ತು 101/3 ಇವುಗಳಲ್ಲಿ ಬಡಾವಣೆ ಮಾಡಿ ನಿನೇಶನ ನೀಡಲು ನಿರ್ಣಯ ಅಂಗೀಕರಿಸಿರುತ್ತಾರೆ. ಅದರೆ ಆ ಸಭೆಯಲ್ಲಿ ತಾನು ಹಾಜರಿದ್ದು, ಇದು ಕಾನೂನುಬಾಹಿರವಾದದ್ದು ಮತ್ತು ಖಾತೆ ಮಾಡಲು ಅರ್ಹವಿಲ್ಲವೆಂದು ಸಭೆಗೆ ಮನವರಿಕೆ ಮಾಡಿದರೂ ಸಹಾ ನಿರ್ಣಯ ಅಂಗೀಕರಿಸಿರುತ್ತಾರೆ. ದಿ.9.3.2012ರಂದು ಸಾಮಾನ್ಯ ಸಭೆಯಲ್ಲಿ ಖಾತೆ

ಮಾಡಲು ಕಾರ್ಯದರ್ಶಿಗೆ ಅಧಿಕಾರ ನೀಡಬಹುದೆಂದು ಸಹ ನಿರ್ಣಯ ಅಂಗೀಕರಿಸಿರುತ್ತಾರೆ. ಆದ್ದರಿಂದ ತಾನು ಯಾವುದೇ ಖಾತೆ ದಾಖಲು ಮಾಡಿರುವುದಿಲ್ಲ, ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಯಾವುದೇ ಒಂದು ಕೃಷಿ ಜಮೀನಿನಲ್ಲಿ ಬಡಾವಣೆ ಮಾಡಿ ನಿವೇಶನ ವಿಂಗಡಿಸಬೇಕಾದರೆ ಮೊದಲು ಆ ಜಮೀನು ಮಾನ್ಯ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗಬೇಕಾಗುತ್ತದೆ. ಆನಂತರ ಬಡಾವಣೆಯ ನಕ್ಷೆ ತಯಾರಿಸಿ ಅದನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಆನಂತರ ಬಡಾವಣೆ ನಿರ್ಮಾಣಮಾಡಬೇಕಾಗುತ್ತದೆ. ಆದರೆ ಈ ದೂರಿನಲ್ಲಿ ನಮೂದಿಸಿರುವ ಜಮೀನುಗಳಲ್ಲಿ ಮಾಡಿದ ಬಡಾವಣೆಯು ಈ ಎಲ್ಲಾ ನಿಯಮಗಳನ್ನೂ ಉಲ್ಲಂಘಿಸಿದ್ದು, ಕಂಡುಬರುತ್ತದೆ.

ಕರ್ನಾಟಕ ಸರ್ಕಾರವು ಈ ರೀತಿ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಅನಧಿಕೃತ ಆಸ್ತಿಗಳ ನೋಂದಣಿಯನ್ನು ನಿಯಂತ್ರಿಸುವ ಬಗ್ಗೆ ಸುತ್ತೋಲೆ ಸಂ:ಗ್ರಾಅಪ 553 ಗ್ರಾಪಂಅ 2012 ದಿ.4.1.2013 ಹೊರಡಿಸಿರುತ್ತದೆ. ಈ ಸುತ್ತೋಲೆ ಪ್ರಕಾರ ಭೂಪರಿವರ್ತನೆ ಆದೇಶವಿಲ್ಲದೆ ಮತ್ತು ಬಡಾವಣೆ ನಕ್ಷೆ ಅನುಮೋದನೆಯಿಲ್ಲದೆ ಆಸ್ತಿಗಳ ನೋಂದಣಿ ಮತ್ತು ಖಾತೆ ತೆರೆಯುವಿಕೆ ಅನಧಿಕೃತವಾಗುತ್ತದೆ.

ದೂರುದಾರರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಸರ್ವೆ ನಂಬರಿನಲ್ಲಿ ನಿವೇಶನ ವಿಂಗಡಿಸಿ ಅದಕ್ಕೆ ಎದುರುದಾರರು ಖಾತಾ ಮಾಡಿರುವುದು ಕಂಡುಬರುತ್ತದೆ. ಈ ಖಾತಾ ಆಧಾರದ ಮೇಲೆ ನಿವೇಶನಗಳನ್ನು ಉಪನೋಂದಣಾಧಿಕಾರಿಗಳಲ್ಲಿ ನೋಂದಣಿ ಸಹ ಮಾಡಲಾಗಿರುತ್ತದೆ. ಆದರೆ ಎದುರುದಾರರು ಒಬ್ಬರಿಗೊಬ್ಬರು ಈ ಅಕ್ರಮವನ್ನು ಒಪ್ಪಿಕೊಳ್ಳದೆ ಇನ್ನೊಬ್ಬರ ಮೇಲೆ ಹಾಕುತ್ತಿರುವುದು ಕಂಡುಬರುತ್ತದೆ. ಈ ಬಡಾವಣೆಯಾದಾಗ 1ನೇ ಎದುರುದಾರರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದು, 2 ಮತ್ತು 3ನೇ ಎದುರುದಾರರು ಕ್ರಮವಾಗಿ ಕಾರ್ಯದರ್ಶಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದರೆಂದು ಕಂಡುಬರುತ್ತದೆ. ಇವರೆಲ್ಲರೂ ಸೇರಿ ಸರ್ಕಾರಿ ಸುತ್ತೋಲೆಯ ಅಂಶಗಳನ್ನು ಗಾಳಿಗೆ ತೂರಿ ಹಾಗೂ ಕಾನೂನುಬಾಹಿರವಾಗಿ ಕೃಷಿ ಜಮೀನಿನಲ್ಲಿ ಮಾಡಿರುವ ನಿವೇಶನಗಳಿಗೆ ನಮೂನೆ 1 ಮತ್ತು 12 ನೀಡಿ, ಖಾತೆ ದಾಖಲು ಮಾಡಿ, ಅದರ ನಕಲನ್ನು ನೀಡಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಆದ್ದರಿಂದ 1 ರಿಂದ 3 ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ, 1ನೆ ಎದುರುದಾರರು ಪಂಚಾಯತಿ ಅಧ್ಯಕ್ಷರಾಗಿರುವುದರಿಂದ ಅವರಿಗೆ ಕೆ.ಸಿ.ಎಸ್.ನಿಯಮಗಳು ಅನ್ವಯಿಸುವುದಿಲ್ಲ.

ಆದ್ದರಿಂದ, 2 ಮತ್ತು 3ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 2 ಮತ್ತು 3ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14–ಎ ಅಡಿಯಲ್ಲಿ 2 ಮತ್ತು 3ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕರಕ್ಕೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/490/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 09–06–2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಪ್ರಸಾದ್, ಕಾರ್ಯದರ್ಶಿ ಮತ್ತು ಶ್ರೀಮತಿ ಶೃತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಕುಂಟೆ ಗ್ರಾಮ ಪಂಚಾಯತಿ, ಹೊಸಕೋಟೆ ತಾಲ್ಲೂಕು, ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 78 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
6. ಶ್ರೀ ಪ್ರಸಾದ್, ಕಾರ್ಯದರ್ಶಿ ಕಲ್ಲುಂಟೆ ಗ್ರಾಮ ಪಂಚಾಯತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶ್ರೀಮತಿ ಶೃತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಲುಂಟೆ ಗ್ರಾಮ ಪಂಚಾಯತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
9. ಗಣಕ ಕೋಶ.